ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಇತ್ತೀಚಿಗೆ ವಿವಿಗಳು ಕೊಡುವ ಗೌರವ ಡಾಕ್ಟರೇಟ್‌ಗಳು ಗೌರವ ಕಳೆದುಕೊಳ್ಳುತ್ತಿರಲು ಕಾರಣವೇನು?*



ಆ ಡಾಕ್ಟರೇಟ್‌ಗಳು ವಿ – ವಿತ್ತಕ್ಕಾಗಿ; ವಿ – ವಿತರಿಸಲ್ಪಟ್ಟವು ಆದುದರಿಂದ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*'ಮಳೆ ನಿಂತೇ ಇಲ್ಲ' ಅಂತಾರಲ್ಲಾ, ಮಳೆ ಎಂದಾದರೂ ಕೂತುಕೊಳ್ಳತ್ತೇನು?*
ಮಳೆಯೂ ಮಗುವಿನಂತೆಯೇ; ಬಿದ್ದೂ ಬಿದ್ದೂ ನಿಲ್ಲುತ್ತದೆ; ಮೋಡದಲ್ಲಿ ಕೂತುಕೊಳ್ಳುತ್ತದೆ.

ಎಂ.ಎ. ಕುಮಾರ್, ಬೆಂಗಳೂರು
*ಸ್ವರ್ಗದಲ್ಲಿ ನಡೆಯುವ ಮದುವೆ ವಿಚ್ಛೇದನಗೊಳ್ಳುವುದಿಲ್ಲ. ಏಕೆ?*
ಒಂದೇ ಕಾರಣ – ಸ್ವರ್ಗದಲ್ಲಿ ವಕೀಲರು ಇರುವುದಿಲ್ಲ.

ಕೆ.ಎಂ. ವೀರೇಶ್, ಕೂಡ್ಲಿಗಿ
*ಜಗತ್ತಿನಲ್ಲಿ ಅತ್ಯಂತ ಶ್ರೇಷ್ಠ ವಸ್ತು ಯಾವುದು?*
ನಿಷ್ಕಲ್ಮಷತೆ.

ಅಮರಯ್ಯಾ ಪತ್ರಿಮಠ, ಶೋರಾಪೂರ
*ನೀವು ಯಾರು?*



ಜಗದ ಅಗಾಧತೆಯ ಮುಂದೆ ಯಾರೆಂದರೆ ಯಾರೂ ಅಲ್ಲದವನು.

ಎಸ್. ಶ್ರೀಕಂಠೇಶ್ವರ, ಬೆಂಗಳೂರು
*ಇಲ್ಲೊಬ್ಬ ಮನೆಯ ಮುಂದೆ, ನಾಯಿ ಸಾಕದಿದ್ದರೂ, 'ಬಿವೇರ್ ಆಫ್ ವೈಫ್' ಎಂದು ಬೋರ್ಡ್ ಹಾಕಿದ್ದಾರಲ್ಲಾ...?*
ಆ ಕುಡುಕ, ತಿಕ್ಕಲ ಪಟಾಲಂ ಮೇಲೆ ಆಕೆ ಆಗಾಗ್ಗೆ ಉರಿದುಬಿದ್ದುದರ ಪ್ರಭಾವ.

ಸಿ. ನಾಗರಾಜ ಅರದೋಟ್ಲು, ಭದ್ರಾವತಿ
*ಭಯದಿಂದ ದೇವರು ಹುಟ್ಟಿದನೋ ಅಥವಾ ದೇವರಿಂದ ಭಯ ಹುಟ್ಟಿತೋ?*
ಮೊದಲಿಗೆ ಹುಟ್ಟುವುದು ಆಸೆ; ನಂತರ ಕ್ರಮವಾಗಿ ದುರ್ಗುಣ, ದುಷ್ಕಾರ್ಯ, ಭಯ, ದೇವರು.

ಎಚ್. ಜಿ. ಜಗದೀಶ್, ಮೈಸೂರು
*ಮದುವೆ ದಲ್ಲಾಳಿ ಕೆಲಸ ಪುಣ್ಯಕರವಾದದ್ದೇ ರಾಂಜೀ?*
ನೂರಾರು ಜನಕ್ಕೆ ಊಟ, ಪುರೋಹಿತರಿಗೆ ದಕ್ಷಿಣೆ, ವಾಲಗದವರಿಗೆ ಕೆಲಸ.... ಅನ್ನ, ಧನ, ಉದ್ಯೋಗ ದೊರಕಿಸುವುದು ಪುಣ್ಯಕರವೇ!

ನವಿರವಿ, ಬಾಳೆಹೊನ್ನೂರು
*ಅಯ್ಯಪ್ಪಾ... ಏಳೇಳು ಜನ್ಮಕ್ಕೂ ಗಂಡಹೆಂಡತಿಯಾಗಿ ಹುಟ್ಟಿದರೆ ಅದೇ ಅತ್ತೆ ಮಾವ ಏಳೇಳು ಜನ್ಮಕ್ಕೂ ಸಿಗುತ್ತಾರಾ?*
ಅಬ್ಬ! ತಿಳಿಯಿತಲ್ಲ! ಅದಕ್ಕೇ ಎಲ್ಲರೂ 'ತಂದೆಯೇ, ಮೋಕ್ಷ ಕೊಡೋ...' ಎನ್ನುವುದು.

ಮುರಲೀಧರ ಕುಲಕರ್ಣಿ, ಬೀದರ್
*ಯಾವ ತಪಸ್ಸನ್ನೂ ಆಚರಿಸದ ಸಾಧಾರಣ ಸಾಧುಗಳೆಲ್ಲ ತಮ್ಮನ್ನು 'ಮಹರ್ಷಿ' ಎಂದು ಕರೆದುಕೊಳ್ಳುತ್ತಿದ್ದಾರಲ್ಲ...?*
ತಪ್ಪೇನಿಲ್ಲ. ಅವರ ಪ್ರಕಾರ ಮಹತ್ತರವಾದ ಹರ್ಷದಲ್ಲಿ ಇರುವವನೇ ಮಹರ್ಷಿ.

ವೈ.ಎನ್. ಸುಂದರೇಶನ್, ಮೈಸೂರು
*ಹುಡುಗಿಯರು ಕೊಡುವ ಮುತ್ತಿನಲ್ಲಿ ಸಿಹಿ-ಕಹಿಗಳೆಂಬ ಭೇದ ಉಂಟೆ?*
'ಉಂಟು; ನನಗೆ ಕೊಟ್ಟರೆ ಸಿಹಿ; ಪರರಿಗೆ ಕೊಟ್ಟರೆ ಕಹಿ!' ಎಂದನೊಬ್ಬ ರಸಿಕ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಕ್ರೀಡೆಗಳಲ್ಲಿ ನಮಗೆ ದೊಡ್ಡ ಗೌರವಗಳು ದೊರಕುವ ದಿನ ಬರುತ್ತದೆಯೇ?*
ಭಾರ ಹೊರುವುದರಲ್ಲಿ ಕೃಷ್ಣ, ಗುರಿಯಲ್ಲಿ ಅರ್ಜುನ, ಲಾಂಗ್ & ಹೈ ಜಂಪ್‌ನಲ್ಲಿ ಹನುಮ; ನಾವು ಕ್ರೀಡೆಗಳಲ್ಲಿ ಎಂದೂ ಮುಂದೇ!

ಪಿ.ಜೆ. ರಾಘವೇಂದ್ರ, ಮೈಸೂರು
*ಜಗದ್ಗುರುವಿಗೂ, ಜಗತ್ ಕಿಲಾಡಿಗೂ ಏನು ವ್ಯತ್ಯಾಸ?*
ಕೆಲವು ಸಂದರ್ಭಗಳಲ್ಲಿ ಜಗತ್ ಕಿಲಾಡಿ ಎನ್ನುವುದು ಜಗದ್ಗುರುವಿನ ಪೂರ್ವಾಶ್ರಮ.

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಕೊಲೆ ಮಾಡಿ ವಿಷಯ ಮುಚ್ಚಿಡಬಹುದು. ಪ್ರೀತಿ ಮಾಡಿ ವಿಷಯ ಮುಚ್ಚಿಡಲಾಗದು. ಏಕೆ?*
ಏಕೆಂದರೆ ಕೊಲೆ ಫುಲ್ ಸ್ಟಾಪ್; ಪ್ರೀತಿ ಕಾಮಾ....

ಎಂ.ವಿ. ವೆಂಕಮ್ಮ, ಬಳ್ಳಾರಿ
*ಲೇಖನಿಗೂ, ನಾಲಿಗೆಗೂ ಏನು ವ್ಯತ್ಯಾಸ?*
ಜಾಣನಿಗೆ ಲೇಖನಿ ಪೆಟ್ಟು, ದಡ್ಡನಿಗೆ ನಾಲಿಗೆ ಪೆಟ್ಟು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಒಂದು ಹೆಣ್ಣು ಇನ್ನೊಂದು ಜೀವಕ್ಕೆ ಪ್ರಾಣ ಕೊಡುತ್ತೆ. ಒಂದು ಗಂಡು?*
ಇನ್ನೊಂದು, ಮತ್ತೊಂದು ಹೆಣ್ಣಿಗೆ ಪ್ರಾಣ ಬಿಡುತ್ತೆ!

ಆರ್. ಮಧುಸೂದನ್, ಹಾಸನ
*ಭಕ್ತರು ಕೊಡುವ ಅಷ್ಟೊಂದು ಎಣ್ಣೆ ತಿಂಡಿಗಳನ್ನು ತಿಂದರೆ ಗಣೇಶನಿಗೆ ಅಸಿಡಿಟಿ ಬರೋದಿಲ್ವಾ?*



ನಂತರ ನೀರಿನಲ್ಲೇ ಮುಳುಗುವನಲ್ಲ; ಹೊಟ್ಟೆಯ ಮೇಲೆ ತಣ್ಣೀರೇ ಅಸಿಡಿಟಿಗೆ ದಿವ್ಯೌಷಧ.

ಮೂಲೆಮನೆ ರತ್ನಾಕರ ಭಿಡೆ, ಬೆಂಗಳೂರು
*ಭೂಮಿಗಿಂತ ದೊಡ್ಡ ವಸ್ತು ಯಾವುದು ಅಂತ ಯಕ್ಷ ಧರ್ಮರಾಯನನ್ನು ಕೇಳುವ ಬದಲು ರಾಜಕಾರಿಣಿಯನ್ನು ಕೇಳಿದ್ದರೆ....?*
ಭೂಕಬಳಿಕೆಯಿಂದ ಬರುವ ಹಣ ಎನ್ನುತ್ತಿದ್ದರು.

ವಿ. ಹೇಮಂತಕುಮಾರ್, ಬೆಂಗಳೂರು
*'ರೀ, ನಾನು ಹೇಗೆ ಕಾಣ್ತಾ ಇದೀನಿ ಹೇಳಿ' ಅಂತ ಸತ್ಯ ಹರಿಶ್ಚಂದ್ರನ ಹೆಂಡತಿ ಅವನನ್ನು ಕೇಳಿದ್ದರೆ?*
ಕನ್ನಡಿ ಮುಂದಿಟ್ಟು ಜಾಗ ಖಾಲಿ ಮಾಡುತ್ತಿದ್ದ.

ಹೆಚ್.ವೈ. ಸೀತಾರಾಮಭಟ್ಟ, ಹಾಲ್ಮುತ್ತೂರು
*ಅತ್ತೆ ಚೂಡಿದಾರ, ಸೊಸೆ ಸೀರೆ. ಏನಂತೀರಿ?*
ಹೊಸ ಫಿಗರ್‍ರು ಹಳೆ ಡ್ರೆಸ್ಸು ಕೂಡಿರಲು ಬಲು ಸೊಗಸು!

■ ರಾಮ್